# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 595 |
| ಸದಸ್ಯರ ಹೆಸರು | : | ಡಾ: ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.12.2024. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮ ಪಂಚಾಯತಿಗಳು ಸರಿ ಸುಮಾರು ರೂ.60.00 ಲಕ್ಷಗಳಿಗಿಂತ ಹೆಚ್ಚು ಮೊತ್ತವನ್ನು ರಾಜ್ಯದ ವಿದ್ಯುತ್ ನಿಗಮಗಳಿಗೆ ಬಾಕಿ ಉಳಿಸಿಕೊಂಡಿದ್ದು, ಅದಕ್ಕೆ ಬಡ್ಡಿಯನ್ನು ಪಾವತಿಸಬೇಕಾಗಿದ್ದು, ಪಂಚಾಯತಿಗಳು ಉಳಿಸಿಕೊಂಡಿರುವ ವಿದ್ಯುತ್ ಬಾಕಿಯ ಮೊತ್ತವನ್ನು ವಿದ್ಯುತ್ ನಿಗಮಗಳಿಗೆ ಪಾವತಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ದಿನಾಂಕ:01.04.2015 ರಿಂದ 31.03.2023 ರವರೆಗೆ ಗ್ರಾಮ ಪಂಚಾಯಿತಿಗಳು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಬೇಕಾಗಿರುವ ಕುಡಿಯುವ ನೀರು ಮತ್ತು ಬೀದಿ ದೀಪ ಸ್ಥಾವರಗಳ ಬಾಕಿ ವಿದ್ಯುತ್ ಶುಲ್ಕದ ಒಟ್ಟು ಮೊತ್ತ ರೂ.6,509.90 ಕೋಟಿಗಳಲ್ಲಿ ಅಸಲು ಮೊತ್ತ ರೂ.5,257.70 ಕೋಟಿಗಳನ್ನು ಆದೇಶ ಸಂಖ್ಯೆ: ಎನರ್ಜಿ/61/ಪಿಎಸ್ ಆರ್/2024, ದಿನಾಂಕ:30-03-2024 ರಲ್ಲಿ ಸರ್ಕಾರದ ಖಾತರೀಕರಣ ಮೂಲಕ ತೀರುವಳಿ ಮಾಡಿ ಹಾಗೂ ಬಡ್ಡಿ ಮೊತ್ತ ರೂ.1,252.20 ಕೋಟಿಗಳನ್ನು ಮನ್ನಾ ಮಾಡಿ ಆದೇಶ ಹೊರಡಿಸಲಾಗಿದೆ.<br><br>ಮುಂದುವರೆದು, ದಿನಾಂಕ:01-04-2023 ರಿಂದ 30-09-2024 ರವರೆಗೆ ಗ್ರಾಮ ಪಂಚಾಯತಿಗಳ ಕುಡಿಯುವ ನೀರು ಮತ್ತು ಬೀದಿ ದೀಪ ಸ್ಥಾವರಗಳ ವಿದ್ಯುತ್ ಶುಲ್ಕದ ಒಟ್ಟು ಮೊತ್ತ ರೂ.3,719.20 ಕೋಟಿಗಳು ಬಾಕಿ ಇರುತ್ತದೆ. ಈ ಮೊತ್ತದಲ್ಲಿ ಅಸಲು ಮೊತ್ತ ರೂ.2,749.54 ಕೋಟಿಗಳು ಮತ್ತು ಬಡ್ಡಿ ಮೊತ್ತ ರೂ.969.66 ಕೋಟಿಗಳು ಒಳಗೊಂಡಿದ್ದು, ಸದರಿ ಮೊತ್ತವನ್ನು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಬೇಕಾಗಿರುತ್ತದೆ.<br><br>ಗ್ರಾಮ ಪಂಚಾಯತಿಗಳಿಗೆ ರಾಜ್ಯ ಹಣಕಾಸು ಆಯೋಗದ ಅಭಿವೃದ್ಧಿ ಅನುದಾನ / ಗ್ರಾಮ ಪಂಚಾಯತಿಗಳಿಗೆ ಸಹಾಯ ಹೆಸರಿನಲ್ಲಿ ಒಟ್ಟು 1202.18 ಕೋಟಿಗಳ ಅನುದಾನವನ್ನು 2021-25 ನೇ ಸಾಲಿನಲ್ಲಿ ಒದಗಿಸಿದ್ದು, ಈ ಪೈಕಿ ರೂ. 391.79 ಕೋಟಿಗಳ ಅನುದಾನವನ್ನು ಗ್ರಾಮ ಪಂಚಾಯತಿಗಳ ವಿದ್ಯುತ್ ಶುಲ್ಕದ ಮೊತ್ತ ಭರಿಸಲು ಬಿಡುಗಡೆ ಮಾಡಲಾಗುತ್ತಿದೆ. ಅಲ್ಲದೆ, ಗ್ರಾಮ ಪಂಚಾಯತಿಗಳು ಸ್ವಂತ ಸಂಪನ್ಮೂಲದಿಂದ ವಿದ್ಯುತ್ ಶುಲ್ಕದ ಮೊತ್ತವನ್ನು ಭರಿಸಬಹುದಾಗಿದೆ. |
| (ಆ) | ಗ್ರಾಮ ಪಂಚಾಯತಿ ಸದಸ್ಯರಿಗೆ ನೀಡುವ ಗೌರವಧನ ಪಾವತಿಯು ಸುಮಾರು 6 ತಿಂಗಳುಗಳಿಂದ ಪಾವತಿಸದೆ ಬಾಕಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಗೌರವಧನ ಪಾವತಿಗೆ ತೆಗೆದುಕೊಂಡಿರುವ ಕ್ರಮಗಳೇನು; | 2024-25ನೇ ಸಾಲಿನ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳ ಗೌರವ ಧನಕ್ಕಾಗಿ 273.78 ಕೋಟಿಗಳ ಅನುದಾನ ಒದಗಿಸಲಾಗಿದ್ದು, ಡಿಸೆಂಬರ್ 2024 ರವರೆಗಿನ ಗೌರವಧನವನ್ನು ಬಿಡುಗಡೆ ಮಾಡಲಾಗಿದೆ. |
| (ಇ) | ನಗರ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯತಿಗಳಿಗೆ ಬರುವ ತೆರಿಗೆ ಹಾಗೂ ಇತರೆ ಸಂಪನ್ಮೂಲ ಮೂಲಗಳಿಂದ ಆರ್ಥಿಕವಾಗಿ ಬಲಿಷ್ಠವಾಗಿದ್ದು, ಗ್ರಾಮಾಂತರದಲ್ಲಿರುವ ಪಂಚಾಯತಿಗಳು ಆರ್ಥಿಕವಾಗಿ ದುರ್ಬಲವಾಗಿರುವುದರಿಂದ ಇವುಗಳಿಗೆ ಅನುದಾನ ಹೆಚ್ಚಿಸಲು ಸರ್ಕಾರದ ಹಂತದಲ್ಲಿ ಚಿಂತನೆ ಮಾಡಲಾಗಿದೆಯೇ? | ಇಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

ಸಂಖ್ಯೆ: ಗ್ರಾಅಪ 654 ಗ್ರಾಪಂಅ 2024

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

# KARNATAKA LEGISLATIVE COUNCIL

Starred Qn No. : 595

Name of the Member Dr. D. Thimmaiah (Elected by Local bodies)

Date of Answer : 13-12-2024.

To be answered by : Hon'ble Minister for Rural Devt. & Panchayath Raj, Information and Technology and Biotechnology.

| Sl.No. | Question | Answer |
|---|---|---|
| a | Gram Panchayats have arrears of more than Rs. 60.00 lakhs to the state electricity corporations, for which interest has to be paid by the Grama Panchayath. What are the steps taken by the government to pay the arrears of electricity bills of Grama Panchayath which are dues to the electricity corporations? | The Government has issued the Government Order No. Energy/61/PSR/2024, dated:30.03.2024 wherein it is stated that the Government has undertaken the guarantee for the clearance of Electricity Bills of Grama Panchayaths pertaining to the supply of drinking water and street light charges occurred during period dated:01.04.2015 to 31.03.2023. The total Electricity charges are estimated to Rs. 6,509.90 crores. Out of which the principal amount Rs. 5,257.70 crores is considered for clearance through securitization by the Government. Remaining interest amount Rs. 1,252.20 crores is ordered to be waived in this Government order.<br><br>Further, electricity bills amounting to Rs. 3,719.20 crores are due from the Grama Panchayaths in respect of bills for supply of drinking water and street light charges during the period dated:01.04.2023 to 30.09.2024. This amount includes the principal amount of Rs.2,749.54 crores and interest amount of Rs. 969.66 crores. This amount has to be paid to the Electricity Companies by the Grama Panchayaths.<br><br>The Government has released State Finance Commission grants to the total amount of Rs. 1202.18 crores for the period 2024-25 to the Grama Panchayaths fo the State, out of which Rs. 391.79 crores has been released for the payments of Electricity bills of the Grama Panchayaths. |

| | | |
|---|---|---|
| b | Is it comes to the notice of the Government that the honorarium of the members of the Gram Panchayaths is not paid since 6 months. What steps have been taken by the Government to pay the arrears of the honorarium due to members of the Grama Panchayaths. | The Government has released Rs. 273.78 crores grants for the payment of honorarium of Grama Panchayath members for the year 2024-25. Honorarium upto December-2024 has been released. |
| c | Since urban gram panchayats are financially strong due to taxes and other resource sources, while rural panchayats are financially weak, is the Government is considering to increase the grants to such Grama Panchayaths. | There no such proposal before the Government. |

**No. RDP 654 GPA 2024.**

**(Priyank Kharge)**
Hon'ble Minister for Rural Devt. &
Panchayath Raj, Information
and Technology and Biotechnology.